# ಭೀಮಭಕ್ತನ ಲೋಕಹೆಜ್ಜೆ



■ ಪ್ರವೀಣ ಕುಲಕರ್ಣಿ

ಮಳೆ ನಿಂತರೂ ಮರದ ಹನಿ ನಿಲ್ಲಲಿಲ್ಲ ಎಂಬಂತೆ ಈ ಬಾರಿಯ ಲೋಕಸಭಾ ಚುನಾವಣೆ ಫಲಿತಾಂಶ ಹೊರಬಿದ್ದು ಹಲವು ದಿನಗಳೇ ಗತಿಸಿದರೂ ಫಲಿತಾಂಶದ ಫಲಶ್ರುತಿ ಕುರಿತು ಇನ್ನೂ ಚರ್ಚೆಗಳು ನಡೆಯುತ್ತಲೇ ಇವೆ. ಬಹುಮತ ಪಡೆಯುವಲ್ಲಿ ಬಿಜೆಪಿ ಸೋತಿದ್ದೇಕೆ, ಕಾಂಗ್ರೆಸ್ ತನ್ನ ಸಾಮರ್ಥ್ಯ ಹೆಚ್ಚಿಸಿಕೊಂಡಿದ್ದು ಹೇಗೆ ಎಂಬ ವಿಷಯವಾಗಿಯೇ ಚರ್ಚೆ ಗಿರಕಿ ಹೊಡೆಯುತ್ತಿದೆ. ಆದರೆ, ಈ ಸಲದ ಚುನಾವಣಾ ಫಲಿತಾಂಶ ಇನ್ನೂ ಕೆಲವು ಅಚ್ಚರಿಗಳನ್ನು ನೀಡಿದೆ. ಚಂದ್ರಶೇಖರ್ ಆಜಾದ್ ರಾವಣ್ ಅವರ ಗೆಲುವು ಅಂತಹ ಅಚ್ಚರಿಗಳಲ್ಲೊಂದು. ಪುಟ್ಟ ಹೆಜ್ಜೆಯಾದರೂ ದಲಿತ ರಾಜಕಾರಣಕ್ಕೆ ಹೊಸ ದಿಕ್ಕು ತೋರಬಲ್ಲ ಈ ಗೆಲುವು ಏಕೋ ದೇಶದ ಗಮನವನ್ನು ಅಷ್ಟಾಗಿ ಸೆಳೆದಿಲ್ಲ.

ಉತ್ತರ ಪ್ರದೇಶದ ನಗಿನಾ ಕ್ಷೇತ್ರದಿಂದ ಆಯ್ಕೆಯಾಗಿರುವ ಆಜಾದ್ ಸಮಾಜ ಪಾರ್ಟಿಯ ನಾಯಕ ಚಂದ್ರಶೇಖರ್ ಅವರಿಗೆ ದೇಶದ ರಾಜಕೀಯದ ಹೊನಲಿನಲ್ಲಿ ಹೊಸ ನೀರನ್ನು ಹರಿಸಬಲ್ಲ ತಾಕತ್ತಿದೆ. ಬಿಲ್ಲಿನಂತೆ ಹುರಿಗಟ್ಟಿದ ಮೀಸೆ ಹೊತ್ತ ಈ ಬಿಸಿರಕ್ತದ ಯುವಕ ರಾಜಕೀಯದಲ್ಲಿ ಹೊಸ ಭರವಸೆಯಾಗಿ ಬೆಳೆದು ನಿಂತಿದ್ದಾರೆ. ಈ ಯುವಕನ ಸಿದ್ಧಾಂತ ತುಂಬಾ ಸರಳವಾಗಿದೆ. ‘ರಾಜಕೀಯದ ಮೂಲಕ ನಾನು ಏನೇ ಕೆಲಸ ಮಾಡುವುದಿದ್ದರೂ ಅದು ದಲಿತರು, ಆದಿವಾಸಿಗಳು, ಮುಸ್ಲಿಮರು, ಯುವಕರು ಮತ್ತು ಮಹಿಳೆಯರ ಕಲ್ಯಾಣವನ್ನೇ ಗುರಿಯಾಗಿ ಇಟ್ಟುಕೊಂಡಿರುತ್ತದೆ. ಅನ್ಯಾಯದ ವಿರುದ್ಧದ ಬಣದಲ್ಲಿ ನಾನು ಸದಾ ಗುರುತಿಸಿಕೊಳ್ಳಲು ಇಷ್ಟಪಡುವೆ’ ಎಂದು ಅವರು ಹೇಳುತ್ತಾರೆ.

ಅಂಬೇಡ್ಕರ್ ವಾದ ಅವರ ರಕ್ತದ ಕಣ ಕಣದಲ್ಲೂ ಹರಿಯುತ್ತಿದೆ. ವಕೀಲನಾಗಿರುವ ಚಂದ್ರಶೇಖರ್ ಅವರು ಮಾತನಾಡಲು ನಿಂತರೆ, ಕೇಳಿಸಿಕೊಳ್ಳುವವರ ಮೈಮನದಲ್ಲಿ ಅಂಬೇಡ್ಕರ್ ಮೇಲಿನ ಪ್ರೀತಿ ಪುಟಿದೆದ್ದು ನಿಲ್ಲಬೇಕು. ಬಾಬಾಸಾಹೇಬರ ಮೇಲಿನ ಪ್ರೀತಿಯಿಂದಾಗಿಯೇ ಅವರು ‘ಭೀಮ್ ಆರ್ಮಿ’ಯನ್ನು ಕಟ್ಟಿದವರು. ಜಗತ್ತಿನ ಭವಿಷ್ಯಕ್ಕೆ ದಿಕ್ಸೂಚಿಯಾಗಬಲ್ಲ ಪ್ರಪಂಚದ ನೂರು ಯುವ ನಾಯಕರಲ್ಲಿ ಚಂದ್ರಶೇಖರ್ ಅವರನ್ನೂ ಒಬ್ಬರಾಗಿ ಗುರುತಿಸಿತ್ತು ಇಂಗ್ಲೆಂಡ್‌ನ ಟೈಮ್ ಮ್ಯಾಗಜಿನ್. ಈ ‘ಭೀಮ ಭಕ್ತ’ ಗಡ್ಕೌಲಿ ಗ್ರಾಮದ ಹೊರವಲಯದಲ್ಲಿ ಹಾಕಿದ್ದ ಹೋರ್ಡಿಂಗ್‌ವೊಂದು ದೇಶದ ಗಮನಸೆಳೆದಿತ್ತು. ಆ ಹೋರ್ಡಿಂಗ್‌ನಲ್ಲಿದ್ದ ಬರಹ ಹೀಗಿತ್ತು: ‘ಮಹಾನ್ ಚಮ್ಮಾರ, ಡಾ. ಭೀಮರಾವ್ ಅಂಬೇಡ್ಕರರ ಗ್ರಾಮ ಗಡ್ಕೌಲಿ, ನಿಮಗೆ ಸ್ವಾಗತ ಕೋರುತ್ತದೆ’. ಈ ಹೋರ್ಡಿಂಗ್ ಸ್ಥಳೀಯ ಠಾಕೂರರನ್ನು ಕೆರಳಿಸಿದರೂ ಈ ತರುಣ ಜಗ್ಗಿರಲಿಲ್ಲ. ಹೀಗೆ ದಲಿತ ಅಸ್ಮಿತೆಯನ್ನು ಹೆಮ್ಮೆಯಿಂದ ಮೇಲೆ ಹಿಡಿದೆತ್ತಿ ನಿಂತ ನಾಯಕ ಇವರು. ಬಹುಜನ ನಾಯಕನಾಗಿ ಬೆಳೆದ ಈ ಹುಡುಗ, ದಲಿತ ಬಡಮಕ್ಕಳಿಗೆ, ವಿಶೇಷವಾಗಿ ಚಮ್ಮಾರರ ಮಕ್ಕಳಿಗೆ ಉಚಿತ ಪಠ್ಯಪುಸ್ತಕ ಒದಗಿಸುತ್ತಾ, ಅವರಿಗೆ ತರಬೇತಿ ನೀಡುತ್ತಾ ಸುಶಿಕ್ಷಿತ ಹೊಸ ತಲೆಮಾರು ಸೃಷ್ಟಿಸಲು ತಮ್ಮ ಇತಿಮಿತಿಯಲ್ಲಿ ಪ್ರಯತ್ನ ಮಾಡಿದವರು. ಅಂಬೇಡ್ಕರ್ ಕೊಟ್ಟ ‘ಶಿಕ್ಷಣ, ಸಂಘಟನೆ, ಹೋರಾಟ’ ಮಂತ್ರದ ದೀಕ್ಷೆ ತೊಟ್ಟವರು.

ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಭೀಮ್ ಆರ್ಮಿ ಎಂತಹ ಸಂಚಲನ ಮೂಡಿಸಿತ್ತು ಎಂದರೆ ದಲಿತರು ತಮ್ಮ ಮೇಲೆ ಪ್ರಬಲ ವರ್ಗಗಳಿಂದ ನಡೆಯುತ್ತಿದ್ದ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲು, ಪೊಲೀಸರ ಹಿಂಸೆಯಿಂದ ಬಚಾವಾಗಲು ಭೀಮ್ ಆರ್ಮಿ ಮುಖಂಡರಿಗೆ ತೆರಪಿಲ್ಲದಂತೆ ಫೋನ್ ಕರೆಗಳು ಬರುತ್ತಿದ್ದವು. ಅಂಬೇಡ್ಕರ್ ಪ್ರತಿಮೆಗಳನ್ನು ಎತ್ತಂಗಡಿ ಮಾಡದಂತೆ ತಡೆಯಲು ಕೂಡ ಭೀಮ್ ಆರ್ಮಿ ಟೊಂಕಕಟ್ಟಿ ನಿಂತಿತು. ಕಾನೂನು ಸಂಘರ್ಷದಲ್ಲಿ ಸಿಲುಕಿದ್ದ ಜನರಿಗೆ ಕಾನೂನು ನೆರವು ನೀಡುವ ಕೆಲಸವನ್ನೂ ಚಂದ್ರಶೇಖರ್ ಅವರ ಭೀಮ್ ಆರ್ಮಿ ಸಂಘಟನೆ ಮಾಡುತ್ತಾ ಬಂತು. ಸಮುದಾಯವನ್ನು ಸಶಕ್ತಗೊಳಿಸಲು ಇದೊಂದು ಬಗೆಯ ಹೋರಾಟದಲ್ಲಿ ತೊಡಗಿದ್ದ ಚಂದ್ರಶೇಖರ್, ರಾಜಕೀಯದತ್ತ ಮುಖ ಮಾಡುತ್ತಿದ್ದಂತೆಯೇ ದಲಿತ–ಮುಸ್ಲಿಂ ಒಗ್ಗಟ್ಟಿನ ಮಂತ್ರ ಜಪಿಸಿದರು. ಪೌರತ್ವ ತಿದ್ದುಪಡಿ ಕಾಯ್ದೆಯ (ಸಿಎಎ) ವಿರುದ್ಧ ಸಕ್ರಿಯವಾಗಿ ತೊಡಗಿಸಿಕೊಂಡರು. ದೆಹಲಿ ಪೊಲೀಸ್ ಪ್ರಧಾನ ಕಚೇರಿ ಮುಂದೆ ಅವರು ನಡೆಸಿದ ಹೋರಾಟ, ಅವರಿಗೆ ಅಪಾರ ಜನಮನ್ನಣೆಯನ್ನು ತಂದುಕೊಟ್ಟಿತು. ಸಿಎಎ ವಿರುದ್ಧದ ಹೋರಾಟಕ್ಕಾಗಿ ಅವರು ಜೈಲಿಗೂ ಹೋಗಿಬಂದರು.

ರಾಜಕೀಯದಲ್ಲಿ ಹೆಜ್ಜೆಗುರುತು ಮೂಡಿಸುವ ಮಹತ್ವಾಕಾಂಕ್ಷೆಯಿಂದ ಆಜಾದ್ ಸಮಾಜ ಪಾರ್ಟಿ (ಕಾನ್ಶಿರಾಮ್) ಎಂಬ ಪಕ್ಷವನ್ನು ಸ್ಥಾಪಿಸಿ, 2021ರಲ್ಲಿ ನೋಂದಣಿ ಮಾಡಿಸಿದರು. ಲೋಕಸಭಾ ಚುನಾವಣೆಗೆ ಭರದ ಸಿದ್ಧತೆಯನ್ನೂ ಮಾಡಿಕೊಂಡರು. ಈಗ ಫಲಿತಾಂಶ ಜನರ ಮುಂದಿದೆ. ಜಾತಿ ಗಣತಿ ತೀರಾ ಅಗತ್ಯವಾಗಿದೆ. ಅದರ ಆಧಾರದಲ್ಲೇ ಎಲ್ಲ ಕಲ್ಯಾಣ ಕಾರ್ಯಕ್ರಮಗಳು ಜಾರಿಯಾಗಬೇಕಿವೆ ಎಂಬ ಪ್ರಬಲ ವಾದವನ್ನು ಅವರು ಮಂಡಿಸುತ್ತಾರೆ. ಸಂವಿಧಾನವನ್ನು ಯಾರೂ ಬದಲಿಸಲು ಸಾಧ್ಯವಿಲ್ಲ. ಏಕೆಂದರೆ, ಈಗ ನಮ್ಮಂಥವರೂ ಲೋಕಸಭೆಯಲ್ಲಿ ಬಂದು ಕುಳಿತಿದ್ದೇವೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ, ಸರ್ಕಾರಿ ಶಾಲೆಯ ನಿವೃತ್ತ ಪ್ರಾಚಾರ್ಯರ ಈ ಪುತ್ರ. ಚಂದ್ರಶೇಖರ್ ಅವರು 1.5 ಲಕ್ಷ ಮತಗಳ ಅಂತರದಿಂದ ಜಯ ಸಾಧಿಸಿದ್ದಾರೆ. ಆ ಗೆಲುವಿನಲ್ಲಿ ಹೊಸ ರಾಜಕೀಯದ ಉದಯದ ಹೊಂಗಿರಣವೊಂದು ಗೋಚರಿಸುತ್ತಿದೆ. ಆ ಮೂಲಕ ಸಂಸತ್ ಭವನದಲ್ಲಿ ದಲಿತ ಧ್ವನಿಯೂ ಮೊಳಗಲಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65